೬. ಗಮನ ಸೆಳೆಯುವ ಸೂಚನೆಗಳು

ವಿಷಯ: (ಅ) ಜಿಲ್ಲಾ ತಾಲ್ಲೂಕು ಮತ್ತು ಗ್ರಾಮ ಪಂಚಾಯತ್ ಸದಸ್ಯರಿಗೆ ಗೌರವಧನ ಹೆಚ್ಚಿಸುವ ಬಗ್ಗೆ.

ಶ್ರೀ ಕೆ.ಪ್ರಭಾಕರ ಬಂಗೇರ(ಬೆಳ್ತಂಗಡಿ): ಸನ್ಮಾನ್ಯ ಸಭಾಧ್ಯಕ್ಷರೇ, ಜಿಲ್ಲಾ ತಾಲ್ಲೂಕು ಪಂಚಾಯ್ತಿ ಸದಸ್ಯರು ಹಾಗೂ ಗ್ರಾಮ ಪಂಚಾಯತ್ ಅಧ್ಯಕ್ಷರು, ಉಪಾಧ್ಯಕ್ಷರುಗಳಿಗೆ ನೀಡಲಾಗುತ್ತಿರುವ ಗೌರವ ಧನವನ್ನು ಹೆಚ್ಚಿಸುವ ಬಗ್ಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಅಧ್ಯಕ್ಷರು: ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಬಂದಿಲ್ಲ.

ಶ್ರೀ ಡಿ.ಪಿ.ಸದಾನಂದಗೌಡ(ಪುತ್ತೂರು): ತಾವು ಅಜೆಂಡಾದಲ್ಲಿ ಈ ಒಂದು ಪ್ರಮುಖ ವಿಚಾರವನ್ನು ನಮೂದಿಸಿದ್ದೀರಿ. ಇದುವರೆಗೆ ಸದನದಲ್ಲಿ ಗಮನ ಸೆಳೆಯುವ ಸೂಚನೆಗಳು ಬರಲೇ ಇಲ್ಲ. ನಾಳೆಯಿಂದ ತಾವು ಅವಕಾಶ ಮಾಡಿಕೊಡುತ್ತಿದ್ದೀರಿ, ತಮಗೆ ಅಭಿನಂದನೆಗಳು. ಆದರೆ, ತಾವು ಅವಕಾಶ ಮಾಡಿಕೊಟ್ಟರೂ ಕೂಡ ಸಂಬಂಧಪಟ್ಟ ಮಂತ್ರಿಗಳ ಅನುಪಸ್ಥಿತಿ ಬಹುಶಃ ನಮ್ಮನ್ನು ಬಾರಿ ಪೇಚಿಗೆ ಸಿಕ್ಕಿಸುತ್ತಿದೆ.

ಅಧ್ಯಕ್ಷರು: ಬಹುಶಃ ಆ ಹೌಸ್‌ನಲ್ಲಿ ಏನಾದರೂ ಇದ್ದಾರೆಯೇ ನೋಡೋಣ. ಇದನ್ನು ಫೈಂಡ್ ಔಟ್ ಮಾಡೋಣ.

ಆ) ರಾಜ್ಯದ ಸಕ್ಕರೆ ಕಾರ್ಖಾನೆಗಳಲ್ಲಿ ರೈತರಿಗೆ ನೀಡಬೇಕಾದ ಹಣವನ್ನು ಪಾವತಿ ಮಾಡಲು ಸಮಸ್ಯೆಯಾಗಿರುವ ವಿಚಾರ.

ಶ್ರೀ ಎಂ.ಎಸ್.ಆತ್ಮಾನಂದ(ಮಂಡ್ಯ): ಅಧ್ಯಕ್ಷರೇ, ರಾಜ್ಯದ ಸಕ್ಕರೆ ಕಾರ್ಖಾನೆಗಳು ಉತ್ಪಾದಿಸುತ್ತಿರುವ ಸಕ್ಕರೆ ದಾಸ್ತಾನು ಹೆಚ್ಚುತ್ತಿದ್ದು, ರೈತರಿಗೆ ನೀಡಬೇಕಾಗಿರುವ ಹಣವನ್ನು ಪಾವತಿ ಮಾಡಲು ಸಮಸ್ಯೆಯಾಗಿದ್ದು, ಇದರಿಂದ ರೈತರಿಗೆ ಉಂಟಾಗುತ್ತಿರುವ ತೊಂದರೆ ಬಗ್ಗೆ ಸನ್ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರ ಗಮನವನ್ನು ತಮ್ಮ ಮೂಲಕ ಸೆಳೆಯಬಯಸುತ್ತೇನೆ.

ಶ್ರೀ ಎ.ಕೃಷ್ಣಪ್ಪ(ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು): ಸನ್ಮಾನ್ಯ ಸಭಾಧ್ಯಕ್ಷರೇ, ರಾಜ್ಯದಲ್ಲಿ ಒಟ್ಟು 34 ಸಕ್ಕರೆ ಕಾರ್ಖಾನೆಗಳು ಕಾರ್ಯ ನಿರ್ವಹಿಸುತ್ತಿದ್ದು, ಇವುಗಳ ವಾರ್ಷಿಕ ಸಕ್ಕರೆ ಉತ್ಪಾದನೆ ಸುಮಾರು 15.00ಲಕ್ಷ ಟನ್‌ಗಳಷ್ಟಾಗಿದೆ.

ಆಗಿಂದಾಗ್ಗೆ ಕೇಂದ್ರ ಸರ್ಕಾರದಿಂದ ಬಿಡುಗಡೆಯ ಆದೇಶದನ್ವಯ ಸಕ್ಕರೆಯ ಮಾರಾಟವಾಗುತ್ತಿದ್ದು, ಕೆಲವೊಂದು ಸಂದರ್ಭಗಳಲ್ಲಿ ಮುಕ್ತ ಮಾರುಕಟ್ಟೆಯಲ್ಲಿ ಸಕ್ಕರೆ ಬೆಲೆಯಲ್ಲಿಯ ಏರುಪೇರು ಮತ್ತು ಕುಸಿತದಿಂದಾಗಿ ಕೇಂದ್ರ ಸರ್ಕಾರದ ಬಿಡುಗಡೆ ಆದೇಶವಿದ್ದರೂ, ಕೆಲವೊಮ್ಮೆ ಮಾರಾಟ ಮಾಡಲು ಸಾಧ್ಯವಾಗದೇ ಇರುವ ಸನ್ನಿವೇಶವಿರುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಸಕ್ಕರೆಯ ದಾಸ್ತಾನು ಸಹಜವಾಗಿ ಹೆಚ್ಚು ಸಂಗ್ರಹಣೆಯಾಗುತ್ತದೆ. ಇದರಿಂದಾಗಿ, ಕಬ್ಬು ಬೆಲೆ ಪಾವತಿಸುವಲ್ಲಿಯೂ ಸಹ ವಿಳಂಬವಾಗುತ್ತದೆ. ಇಂತಹ ಸಮಯದಲ್ಲಿ ಕಾರ್ಖಾನೆಗಳೂ ಸಹ ಬೇರೆ ಬೇರೆ ಮೂಲಗಳಿಂದ ಹಣಕಾಸು ವ್ಯವಸ್ಥೆ ಮಾಡಿಕೊಂಡು ಬಾಕಿ ತೀರುವಳಿ ಮಾಡಲು ಶ್ರಮಿಸುತ್ತಿವೆ. ಕೆಲವೊಂದು ಸಕ್ಕರೆ ಕಾರ್ಖಾನೆಗಳನ್ನು ಹೊರತುಪಡಿಸಿದರೆ ಬಹುತೇಕ ಕಾರ್ಖಾನೆಗಳು ರೈತರೊಂದಿಗೆ ಮಾಡಿಕೊಂಡ ಒಪ್ಪಂದದಂತೆ ಕಬ್ಬು ಬೆಲೆಯನ್ನು ಪಾವತಿಸುತ್ತಿವೆ. ಈ ಕಬ್ಬಿನ ಬೆಲೆ ಬಾಕಿಗೆ ಇನ್ನೂ ಒಂದು ಪ್ರಮುಖ ಕಾರಣವೆಂದರೆ ಬಹುತೇಕ ಕಾರ್ಖಾನೆಗಳು ಶಾಸನಬದ್ಧ ಕನಿಷ್ಠ ಬೆಲೆ (ಎಸ್.ಎಂ.ಪಿ.)ಗಿಂತಲೂ ಜಾಸ್ತಿ ಕೊಡುತ್ತಿರುವುದಾಗಿದೆ.

ರಾಜ್ಯದಲ್ಲಿನ ಸಕ್ಕರೆ ಕಾರ್ಖಾನೆಗಳು ಕಬ್ಬು ಸರಬರಾಜುದಾರರಿಗೆ ದಿ:30-6-2001ರಲ್ಲಿದ್ದಂತೆ ಹಾಲಿ ವರ್ಷಕ್ಕೆ ಒಟ್ಟು ರೂ.99.15 ಕೋಟಿ ಪಾವತಿಸಲು ಬಾಕಿ ಉಳಿಸಿಕೊಂಡಿರುತ್ತವೆ. ಇದು ಒಟ್ಟು ಕಬ್ಬಿನ ಬೆಲೆಯ ಶೇ.9.2ರಷ್ಟು ಆಗಿದ್ದು, ಸದರಿ ಮೊತ್ತವು ಸಕ್ಕರೆ ಮಾರಾಟವಾದಂತೆ ಕಡಿಮೆಯಾಗುತ್ತಾ ಹಾಗೂ ಕಾರ್ಖಾನೆಯು ಕಬ್ಬು ನುರಿಸಿದಂತೆ ಹೆಚ್ಚುತ್ತಾ ಹೋಗುತ್ತದೆ. ಅದೇ ರೀತಿ ಹಿಂದಿನ ವರ್ಷಗಳ ಬಾಕಿಯು ಕೇವಲ 2-3 ಕಾರ್ಖಾನೆಗಳ ಬಾಕಿ ಇದ್ದು, ಅದು ಸುಮಾರು ರೂ.22.83 ಕೋಟಿ ಆಗಿದೆ. ಆ ಕಾರ್ಖಾನೆಗಳ ಆರ್ಥಿಕ ಸ್ಥಿತಿ ಹದಗೆಟ್ಟ ಪ್ರಯುಕ್ತ ಬಾಕಿ ಉಳಿದುಕೊಂಡಿದೆ. ಅಂತಹ ಕಾರ್ಖಾನೆಗಳಿಗೆ ಕಟ್ಟುನಿಟ್ಟಿನ ಎಚ್ಚರಿಕೆ ನೀಡಿ ಕೂಡಲೇ ಬಾಕಿ ತೀರುವಳಿ ಮಾಡಲು ಸೂಚಿಸಿದೆ. ಮೇಲಿನ ಎಚ್ಚರಿಕೆಯನ್ನು ಮೀರಿ ಕಬ್ಬಿನ ಬೆಲೆ ಬಾಕಿ ತೀರುವಳಿಯಲ್ಲಿ ವಿಳಂಬ ನೀತಿಯನ್ನು ಅನುಸರಿಸಿದರೆ ಕಬ್ಬು ನಿಯಂತ್ರಣ ಆದೇಶದನ್ವಯ ಕ್ರಮ ಕೈಗೊಳ್ಳಲು ಅವಕಾಶವಿದೆ.

ರಾಜ್ಯದ ಸಕ್ಕರೆ ಕಾರ್ಖಾನೆಗಳಲ್ಲಿ ಪ್ರಸ್ತುತ ಸುಮಾರು ರೂ.1700.00 ಕೋಟಿ ಮೌಲ್ಯದ ಸಕ್ಕರೆ ದಾಸ್ತಾನು ಇದೆ. ದಾಸ್ತಾನಿನ ಮಾರಾಟ ಮಾರುಕಟ್ಟೆಯಲ್ಲಿ ಸಕ್ಕರೆ ಬೆಲೆಯನ್ನಾಧರಿಸಿ ಆಗುತ್ತಿರುತ್ತದೆ. ಸಕ್ಕರೆ ಮಾರಾಟವಾಗಬೇಕಾದರೆ ಮಾರುಕಟ್ಟೆಯಲ್ಲಿ ಲಾಭದಾಯಕ ಬೆಲೆ ಇರಬೇಕಾಗುತ್ತದೆ ಹಾಗೂ ಇದಕ್ಕನುಗುಣವಾಗಿ ಕೇಂದ್ರ ಸರ್ಕಾರದ ಬಿಡುಗಡೆಯ ಆದೇಶಗಳು ಸಹ ತ್ವರಿತವಾಗಿ ಬರಬೇಕಾಗುತ್ತದೆ. ಈ ಪ್ರಕ್ರಿಯೆಯಲ್ಲಿ ವ್ಯತ್ಯಯ ಉಂಟಾದಾಗ ರೈತರಿಗೆ ಕಬ್ಬು ಬೆಲೆಯನ್ನು ಪಾವತಿಸುವಲ್ಲಿ

ಏಳಂಬವಾಗುತ್ತದೆ. ಕಾರ್ಖಾನೆಗಳೂ ಕೂಡ ಬೇರೆ ಮೂಲಗಳಿಂದ ಹಣಕಾಸು ವ್ಯವಸ್ಥೆ ಮಾಡಿಕೊಂಡು ಬಾಕಿ ತೀರುವಳಿ ಮಾಡಬೇಕಾಗುತ್ತದೆ. ರೈತರ ಈ ಆರ್ಥಿಕ ಸಮಸ್ಯೆ ಅಲ್ಪಕಾಲಿಕವಾಗಿದ್ದು ಆಯಾ ಸಂದರ್ಭಕ್ಕನುಗುಣವಾಗಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲಾಗುತ್ತಿದೆ.

+ ಶ್ರೀ ಎಂ.ಎಸ್.ಆತ್ಮಾನಂದ: ಸನ್ಮಾನ್ಯ ಅಧ್ಯಕ್ಷರೇ, ಮಾಡಿಕೆಯಾಗಿ ರೈತ ಕಬ್ಬನ್ನು ಸರಬರಾಜು ಮಾಡಿದ ಮೇಲೆ ಸುಮಾರು 21 ದಿವಸಗಳೊಳಗೆ ಕಾರ್ಖಾನೆ, ರೈತನಿಗೆ ಕಬ್ಬಿನ ಬೆಲೆಯನ್ನು ಪಾವತಿ ಮಾಡಬೇಕೆಂದು ಇರತಕ್ಕಂಥಾದ್ದು. ಆದರೆ, ಸುಮಾರು ಮೂರು ತಿಂಗಳು, ಮೂರುವರೆ ತಿಂಗಳು ಆಗುತ್ತಾ ಇದೆ. ಸಕ್ಕರೆ ಉದ್ಯಮ ಸಂಕಷ್ಟ ಪರಿಸ್ಥಿತಿಯಲ್ಲಿರತಕ್ಕಂಥಾದ್ದು ಸರ್ವ ವಿದಿತವಾದುದು. ಈ ಸಕ್ಕರೆ ಉದ್ಯಮದ ಸಂಕಷ್ಟ ಪರಿಸ್ಥಿತಿಗೆ ಪೂರಕವಾಗಿ ಏನಾದರೂ ಕೂಡ ಉದ್ಯಮಕ್ಕೆ ಸಹಕಾರವಾದ ರೀತಿಯಲ್ಲಿ ಈಗಾಗಲೇ ಘನ ಸರ್ಕಾರ ಸುಮಾರು ನಾಲ್ಕುನೂರು ಕೋಟಿ ರೂಪಾಯಿಗಳ ಆವರ್ತ ನಿಧಿಯನ್ನು ಸ್ಥಾಪನೆ ಮಾಡಿ, ರೈತರ ಕೃಷಿ ಉತ್ಪನ್ನಗಳ ಬೆಲೆ ಬಿದ್ದು ಹೋದಾಗ, ಅವರ ನೆರವಿಗೆ ಬಂದಿರತಕ್ಕ ಉದಾಹರಣೆ ನಮ್ಮ ಮುಂದೆ ಇದೆ. ಇಂತಹ ಕಾಲದಲ್ಲಿ ಅನೇಕ ಪ್ರದೇಶಗಳಲ್ಲಿ ಅನಿವಾರ್ಯವಾಗಿ ಕಬ್ಬನ್ನು ಬೆಳೆಯಬೇಕಾದ ಪರಿಸ್ಥಿತಿ ಬಂದಿದೆ. ರೈತ ತನ್ನ ಬದುಕಿಗಾಗಿ ಈ ಕಬ್ಬನ್ನೇ ನಂಬಿಕೊಂಡಿರುವ ಪರಿಸ್ಥಿತಿ ಇದ್ದಾಗ, ಈ ಒಂದು ಸಕ್ಕರೆ ಕಾರ್ಖಾನೆ ಆರ್ಥಿಕ ಪರಿಸ್ಥಿತಿಗೆ ತೊಂದರೆಯಾದಾಗ, ಸರ್ಕಾರ ಅವರ ನೆರವಿಗೆ ಬರುವುದಕ್ಕೆ ಒಂದು ಧನಕೋಶವನ್ನು ಅಥವಾ ಆವರ್ತನಿಧಿಯನ್ನು ಸ್ಥಾಪನೆ ಮಾಡಲಿ ಎಂಬುದನ್ನು ತಮ್ಮ ಮೂಲಕ ಹೇಳುತ್ತಿದ್ದೇನೆ. ಆ ದಿಸೆಯಲ್ಲಿ ಸರ್ಕಾರ ಆಲೋಚನೆ ಮಾಡಬೇಕೆಂದು ಹೇಳಿ, ಸಕ್ಕರೆ ಕಾರ್ಖಾನೆಗಳಿಗೆ ಸರಿಯಾಗಿ ಸಕ್ಕರೆ ಬಿಡುಗಡೆಯಾಗುವುದಿಲ್ಲ. ನಮ್ಮ ಸರ್ಕಾರದ ಪರವಾಗಿ, ವಿಶೇಷವಾದ ಒಬ್ಬ ಅಧಿಕಾರಿಯನ್ನು ನವದೆಹಲಿಯಲ್ಲಿ ನೇಮಕ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವತ್ತು ಸಕ್ಕರೆ ಉದ್ಯಮದ ಸಂಕಷ್ಟ ಪರಿಸ್ಥಿತಿಯಲ್ಲಿ ರೈತನ ನೆರವಿಗೆ ಬರುವುದಕ್ಕೆ ಸರ್ಕಾರ ಯಾವುದೇ ಕಾರ್ಯಕ್ರಮವನ್ನು ಹಾಕಿಕೊಳ್ಳಲಿಕ್ಕೆ ಅನುವಾಗುತ್ತದ ಎಂಬುದನ್ನು ಕೇಳಬಯಸುತ್ತೇನೆ.

ಶ್ರೀ ಎ.ಕೃಷ್ಣಪ್ಪ:ಮಾನ್ಯ ಸಭಾಧ್ಯಕ್ಷರೇ, ಸನ್ಮಾನ್ಯ ಆತ್ಮಾನಂದ ಅವರಿಗೆ ಮತ್ತು ಅವರ ಆತ್ಮಕ್ಕೆ ಬಹಳ ಚೆನ್ನಾಗಿ ಗೊತ್ತಿದೆ. ಸರ್ಕಾರ ಇಷ್ಟೆಲ್ಲಾ ಪ್ರಯತ್ನಗಳನ್ನು ಮಾಡಿ ಬಿಡಿಕಾಸು ಬಾಕಿ ಇಲ್ಲದೇ, ಅವರ ಜಿಲ್ಲೆಯಲ್ಲಿ ಕಾರ್ಖಾನೆಗಳಿಗೆ ಹಣ ಪಾವತಿಯನ್ನು ಮಾಡಿಸಿದ್ದೇವೆ. ಹಾಗೆಂದಮೇಲೆ, ಬಹಳ ಸ್ಪಷ್ಟವಾದಂಥ ಪ್ರಯತ್ನಗಳು ಈ ಸರ್ಕಾರ ಮಾಡಿದೆ. ಜೊತೆಗೆ, ಇಂತಹ ಸಂದರ್ಭದಲ್ಲಿ ಏನಾದರೂ ಒಂದು ಫಂಡನ್ನು ಕ್ರಿಯೇಟ್ ಮಾಡುತ್ತೀರಾ ಎಂದು ಕೇಳಿದ್ದಾರೆ. ಬಫರ್ ಸ್ಟಾಕ್ ವಿಚಾರದಲ್ಲಿ ಭಾರತ

ಸರ್ಕಾರಕ್ಕೆ ನಾವು ಈಗಾಗಲೇ ಮನವರಿಕೆ ಮಾಡಿಕೊಂಡಿದ್ದೇವೆ. ಅವರು ತೀವ್ರವಾಗಿ ಮಾಡಬೇಕೆಂದು ಕೇಳಿಕೊಂಡಿದ್ದೇವೆ. ಅದು ಆದರೆ, ಬಹುಶಃ ಇವರು ಹೇಳಿದಂತಹ ಸಮಸ್ಯೆಗಳಿಗೆಲ್ಲಾ ಪರಿಹಾರ ಸಿಗುತ್ತದೆ. ಆಮೇಲೆ ಆ ಲಿಫ್ಟ್ ಮಾಡಲು ಆರ್ಡರ್ ಏಚಾರದಲ್ಲಿ ಹೇಳಿದ್ದಾರೆ. ಮೊದಲು ಇದ್ದಷ್ಟು ತಡ ಇಲ್ಲ. ಈಗ ಬಹಳ ಇಂಪ್ರೂವ್ ಆಗಿದೆ. ಭಾರತ ಸರ್ಕಾರವೂ ಕೂಡ ಕರ್ನಾಟಕದ ಕಡೆ ನೋಡುತ್ತಾ ಇದೆ. ಇನ್ನೂ ಒತ್ತಾಯ ಮಾಡಿ, ಹೆಚ್ಚು ಪರಿಹಾರಗಳನ್ನು ಕಂಡುಹಿಡಿಯಲಿಕ್ಕೆ ಸರ್ಕಾರ ಸದಾ ರೈತರ ಪರವಾಗಿ ಇದೆ ಎಂಬುದನ್ನು ಮಾನ್ಯ ಸದಸ್ಯರಿಗೆ ಹೇಳಲಿಕ್ಕೆ ಬಯಸುತ್ತೇನೆ.